


# ಎಳೆ ಚಂದ್ರ

ಹಿತ್ತಿಲ ಪಾಳು ಬಾವಿ
ರಾತ್ರಿಯಿಡೀ ಮಾತಾಡಿತು.
ಯಾರು ಜೊತೆಗೂಡಿರಬಹುದು?


ಮೊನ್ನೆ
ಕಣದ ಸಾಲಿನ ಕತ್ತಲಲ್ಲಿ
ಜೋರು ನಗುವಿತ್ತು.

ಮಧ್ಯ ರಾತ್ರಿಗೆ
ಜನ ಬೆಂಕಿ ಬೆಂಕಿ ಅಂದಿದ್ದರು
ಎದ್ದು ಹೊರಗೋಡಲು ಚಳಿ.

ಬೆಳಗ್ಗೆ ನೋಡಿದರೆ
ಏನೂ ಸುದ್ದಿಯಿಲ್ಲ.

ಅಷ್ಟೇ
ರಾತ್ರಿಯಲ್ಲೊಂದಷ್ಟು
ನಗು
ನರಳು.

ಒಂದಿನ ಬೆಳಗ್ಗೆ
ಪಾಳು ಬಾವಿಯೊಳಗೆ
ಎಳೆ ಚಂದ್ರ.



ನಾಗೇಶ ಹೆಗಡೆ

● **ಮಲ್ಲಿಕಾರ್ಜುನಗೌಡ ತೂಲಹಳ್ಳಿ**